
# ಬಿಳೀ ಮೋಡ ಕರೀ ಮೋಡ



ಕಲೆ: ದರ್ಶನ್ ವಿ.

ಬಿಳೀ ಮೋಡ! ಕರೀ ಮೋಡ!
ನೀಲಿ ಬೆಟ್ಟದ ಮೇಲೆ
ಅದೂ ಇದೂ ಮಾತಾಡುತ್ತ
ನಿಂತಿದ್ದಂತ ವೇಳೆ

ಹಕ್ಕಿ ಒಂದು ಹಾರಿ ಬಂತು
ಏನೋ ಹೇಳೋದಕ್ಕೆ
ಪ್ಲೀಸ್! ಒಪ್ಪಿ ನಾನೂ ನೀವು
ಕೂಡಿ ಆಡೋದಿಕ್ಕೆ!
ಕರೀ ಮೋಡ ಹುಬ್ ಹಾರಿಸ್ತು
ಬಿಳೀ ಮೋಡ ನಗ್ತು!
ಹೀಗೆ ನೋಡಿ! ಹಕ್ಕಿ ಮರಿಗೆ
ಒಳ್ಳೇ ಜತೆ ಸಿಕ್ತು!

ಕಣ್ಣಾಮುಚ್ಚೆ ಕಾಡೇಗೂಡೆ
ಹೇಳ್ತು ಹಕ್ಕಿ ನಕ್ಕು
ಬೆಟ್ಟದ ಹಿಂದೆ ಬಚ್ಚಿಟ್ಕಂತು
ಕಗ್ಗವಿಯೊಂದ ಹೊಕ್ಕು

ಕರೀ ಮೋಡ ಬಿಳೀ ಮೋಡ
ಬೆಟ್ಟದ ಕೆಳಗೆ ಇಳಿದು
ಹಕ್ಕೀಮರೀನ ಹುಡುಕ್ತಾ ಇದ್ವು
ಮಿಂಚಿನ ಟಾರ್ಚು ಹಿಡಿದು

ಕತ್ತಲ ಹೊತ್ತು! ಧೋ ಧೋ ಅಂತ
ಮಳೇ ಬೇರೆ ಬಂತು
ಕರೀ ಮೋಡ ಕರಗೀ ಹೋಯ್ತು
ಬೆಳಗಾಗೋದ್ರಲ್ಲಂತು!

ಬಿಳೀ ಮೋಡ ಕೂತ್ಕಂಡಿತ್ತು
ಅಲ್ಲೇ ಬಂಡೆ ಮೇಲೆ!
ಹಿಡಿಬೇಕೂಂತ ಕಳ್ಳ ಹಕ್ಕೀನ
ಇವತ್ತಲ್ಲ ನಾಳೆ!

**-ಎಚ್.ಎಸ್. ವೆಂಕಟೇಶಮೂರ್ತಿ**